**ಫೋಟೊ ಪ್ರಬಂಧ**

■ ಕಲೀಮ್ ಉಲ್ಲಾ

# ಕಡಲಲೆಯ ಮೇಲೆ ಹಾರುಹಕ್ಕಿಯ ಲೀಲೆ

ಪಕ್ಷಿಗಳನ್ನು ‘ಹಾರಾಡುವ ಹಾಡುಗಳು’ ಎಂದು ಪೂರ್ಣಚಂದ್ರ ತೇಜಸ್ವಿ ಕರೆದಿದ್ದರು. ಆ ಹಾಡುಗಳನ್ನು ಕ್ಯಾಮೆರಾಗಳಲ್ಲಿ ಸೆರೆಹಿಡಿಯಬೇಕಾದರೆ, ಛಾಯಾಗ್ರಾಹಕನ ಮೈಮನಗಳು ಹಾರುವ ಹಕ್ಕಿಯ ಉತ್ಸಾಹ ತುಂಬಿಕೊಂಡಿರಬೇಕು ಹಾಗೂ ಆ ಉಮೇದನ್ನು ವ್ಯಕ್ತಪಡಿಸದೆ ಅಪಾರ ಸಂಯಮ ಪ್ರದರ್ಶಿಸಬೇಕು. ಆಗಷ್ಟೇ ಪಕ್ಷಿಗಳು ರೂಪದರ್ಶಿಗಳಾಗಬಲ್ಲವು. ಈ ಹುಮ್ಮಸ್ಸು–ಸಂಯಮದೊಂದಿಗೆ ಕಡಲ ಕಿನಾರೆಯ ಪರಿಸರದಲ್ಲಿ ಹಕ್ಕಿಗಳ ಛಾಯಾಗ್ರಹಣಕ್ಕೆ ಹೋದಾಗಿನ ಸಚಿತ್ರ ಅನುಭವದ ಈ ಬರಹ, ಸಹೃದಯರ ಮನಸ್ಸಿನಲ್ಲೂ ಕಡಲು, ಮುಗಿಲು, ಹಕ್ಕಿಗಳನ್ನು ಮೂಡಿಸಬಲ್ಲದು.

